## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ

## ಹಿರೇಕೆರೂರು

ಸಿ.ಸಿ. ನಂಃ 1021/2021

**ಡಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರುಃ - ಗುರುರಾಜ

ತಂದೆಯ ಹೆಸರು - ನಾಗರಾಜ ಬಣಕಾರ

ವಯಸ್ಸುಃ - 40 ವರ್ಷ

ಉದ್ಯೋಗ - ವ್ಯವಸಾಯ / ಗುತ್ತಿಗೆದಾರ

ವಾಸಸ್ಥಳ - ಚೆನ್ನಳ್ಳಿ

ದಿನಾಂಕಃ 26-11-2025 ರಂದು ಸಾಕ್ಷಿಯನ್ನು ಕರೆಯಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ - ಆರೋಪಿ ಪರ ಶ್ರೀ ಆರ್. ಸಿ. ಜಿ. ವಕೀಲರಿಂದಃ**

ನಾನು ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದು, ಅವಶ್ಯಕ ಸಾಮಗ್ರಿಗಳನ್ನು ನನ್ನ ಸಹೋದರ ಶಿವರಾಜರವರ ಸಂಸ್ಥೆಯಾದ ATS Private Limited ಕಡೆಯಿಂದ ಖರೀದಿಸುತ್ತಿದ್ದೆ. ಆ ಕಾಲಕ್ಕೆ ನನ್ನ ಸಹೋದರನಿಗೆ 2-3 ಚೆಕ್ಕುಗಳನ್ನು ಕೊಟ್ಟಿದ್ದೆ. ಪಿರ್ಯಾದಿದಾರರು ನನ್ನ ಸಹೋದರ ಶಿವರಾಜರವರೊಂದಿಗೆ ವ್ಯವಹರಿಸುತ್ತಿದ್ದರು. ಇಬ್ಬರು ಸೇರಿ ರಾಣೇಬೆನ್ನೂರಿನಲ್ಲಿ ಬೋರವೆಲ್ಲಗೆ ಸಂಬಂಧಪಟ್ಟಂತೆ ಒಂದು ಸಂಸ್ಥೆಯನ್ನು ನಡೆಸುತ್ತಿದ್ದರು. ಸದರಿ ಸಂಸ್ಥೆ ನಷ್ಟದಲ್ಲಿ ನಡೆಯುತ್ತಿದ್ದಾಗ ಅವರೆಲ್ಲ ಸೇರಿ ವ್ಯವಹಾರದ ನಷ್ಟದ ಬಗ್ಗೆ ಒಂದು ಇತ್ಯರ್ಥಕ್ಕೆ ಬಂದಿರುತ್ತಾರೆ. ಅದರಂತೆ ನಷ್ಟವನ್ನು ಹೊರತುಪಡಿಸಿ ರೂ.2,00,000/- ಗಳನ್ನು ನನ್ನ ಸಹೋದರ ಪಿರ್ಯಾದಿಗೆ ಕೊಡಬೇಕೆಂದು ತೀರ್ಮಾನವಾಯಿತು. ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ನನ್ನ ಸಹೋದರನಿಗೆ ನೀಡಿದ 1 ಚೆಕ್ಕನ್ನು ಪಿರ್ಯಾದಿದಾರರಿಗೆ ಸದರಿ ರೂ.2,00,000/- ಗಳ ಪಾವತಿಗಾಗಿ ನೀಡಿರುತ್ತಾರೆ.

2. ಸದರಿ ಚೆಕ್ಕು ನಗದೀಕರಣಕ್ಕಾಗಿ ಬ್ಯಾಂಕಗೆ ಸಲ್ಲಿಸಿದ ವಿಚಾರ ತಿಳಿದು, ನಾನು ನನ್ನ ಸಹೋದರನನ್ನು ಬೇಟಿ ಮಾಡಿ ಚೆಕ್ಕು ವಾಪಸ್ಸು ಕೊಡುವಂತೆ ಕೇಳಿದಾಗ ಸದರಿ ಚೆಕ್ಕು ತನ್ನೊಂದಿಗೆ ವ್ಯವಹಾರ ನಡೆಸುತ್ತಿರುವ ಪಿರ್ಯಾದಿಯ ಬಳಿ ಇರುವುದಾಗಿ ತಿಳಿಸಿ, ಚೆಕ್ಕನ್ನು ವಾಪಸ್ಸು ಪಡೆದು ನನಗೆ ನೀಡುವುದಾಗಿ ತಿಳಿಸಿದರು. ನನ್ನ ಸಹೋದರನಿಂದ ರೂ. 2,00,000/- ಗಳ ಹಣವನ್ನು ಪಡೆದುಕೊಂಡಾಗ್ಯೂ ಚೆಕ್ಕನ್ನು ವಾಪಸ್ಸು ಕೊಡದೇ ಪಿರ್ಯಾದಿದಾರರು ನನ್ನ ಮೇಲೆ ಈ ಪ್ರಕರಣ ದಾಖಲಿಸಿರುತ್ತಾರೆ.

**ಡಿ.ಡಬ್ಲ್ಯೂಃ 1**

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 26-11-2025

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು